ಡಿಸೆಂಬರ್ 24, 2024. ಜಗತ್ತಿನ ವಿವಿಧೆಡೆ ಕ್ರಿಸ್‌ಮಸ್ ಆಚರಣೆಗೆ ಕೋಟ್ಯಂತರ ಜನ ಸಂಭ್ರಮದಿಂದ ಸಿದ್ಧವಾಗುತ್ತಿದ್ದರೆ, ಅಮೆರಿಕದ ಅಂತರಿಕ್ಷ ಸಂಸ್ಥೆ 'ನಾಸಾ' ಹಾಗೂ ಇತರ ಕೆಲವು ಸಂಸ್ಥೆಗಳ ವಿಜ್ಞಾನಿಗಳು ಭೂಮಿಯಿಂದ ಸುಮಾರು 15 ಕೋಟಿ ಕಿ.ಮೀ. ದೂರದಲ್ಲಿ ನಡೆಯಬಹುದಾದ ಘಟನೆಯೊಂದನ್ನು ಕಾತರದಿಂದ ಎದುರು ನೋಡುತ್ತಿದ್ದರು. ಆ ಘಟನೆ ನಿರೀಕ್ಷೆಯಂತೆ ನಡೆಯುವುದೋ ಇಲ್ಲವೋ ಎಂದು ಚಿಂತಾಕ್ರಾಂತರೂ ಆಗಿದ್ದರು.

ಅವರು ಉದ್ವೇಗ ಹಾಗೂ ಕಾತುರದಿಂದ ಎದುರು ನೋಡುತ್ತಿದ್ದ ಘಟನೆ ಬೇರೇನೂ ಅಲ್ಲ – 'ಪಾರ್ಕರ್ ಸೌರ ಶೋಧಕ' (ಪಾರ್ಕರ್ ಸೋಲಾರ್ ಪ್ರೋಬ್) ಎಂಬ ಪುಟ್ಟ ರೋಬಾಟ್ ನೌಕೆಯು ಸೂರ್ಯನ ಹೊರ ವಾತಾವರಣ 'ಕರೋನಾ'ದ ಒಳಗೆ ಧುಮುಕಿ, ಸೂರ್ಯನ ಮೇಲ್ಮೈಯಿಂದ ಕೇವಲ 61 ಲಕ್ಷ ಕಿ.ಮೀ. ದೂರದಲ್ಲಿ ಊಹಾತೀತ ವೇಗದಿಂದ ಹಾದುಹೋಗುವ ಸಾಹಸ!

ಇದೇನು ಹುಡುಗಾಟವೇ? ಅಪಾರ ಶಾಖ ಹೊಂದಿದ ಬಿಸಿ ಅನಿಲಗಳಿಂದ ರೂಪಿತವಾಗಿ, ಸುಮಾರು ಆರು ಸಾವಿರ ಡಿಗ್ರಿ ಸೆಲ್ಸಿಯಸ್ ಮೇಲ್ಮೈ ಉಷ್ಣತೆಯಿರುವ (ಭೂಮಿಯ ಮೇಲ್ಮೈಯ ಸರಾಸರಿ ಉಷ್ಣತೆ ಕೇವಲ 15 ಡಿಗ್ರಿ ಸೆಲ್ಸಿಯಸ್!) ಸೂರ್ಯನೆಂಬ ದೈತ್ಯ ನಕ್ಷತ್ರವನ್ನು ಸಮೀಪಿಸುವುದು ಮಾನವನಿಗೆ ಸ್ವತಃ ಸಾಧ್ಯವಿಲ್ಲದಿದ್ದರೂ, ತನ್ನ ಕರ್ತೃತ್ವಶಕ್ತಿಯ ಫಲವಾಗಿ ನಿರ್ಮಾಣವಾದ ರೋಬಾಟ್ ನೌಕೆಯೊಂದರ ಮೂಲಕ ಪರೋಕ್ಷವಾಗಿಯಾದರೂ ಸಾಧ್ಯವೇ? ಸೂರ್ಯನ ಸಮೀಪದ ವಿರಾಟ್ ರೂಪದ ಶಾಖ ಪರಿಸರದಲ್ಲಿ ಆ ನೌಕೆ ಸುಟ್ಟು ಆವಿಯಾಗುವುದಿಲ್ಲವೇ? ಇದೇನು ಹುಚ್ಚು ಸಾಹಸ ಮಾನವನದು ಎಂದು ನಮಗನ್ನಿಸಬಹುದು.

ಸೂರ್ಯನ ಬಗ್ಗೆ ತನ್ನ ಜ್ಞಾನದಿಗಂತವನ್ನು ವಿಸ್ತರಿಸಿಕೊಳ್ಳುವ ಹಂಬಲ ಮಾನವನಿಗೆ ಇಂದು ಹೆಚ್ಚಾಗಿದೆ. ಈ ಹಂಬಲ ಬೌದ್ಧಿಕ ಹಸಿವನ್ನು ತಣಿಸಿಕೊಳ್ಳುವುದಕ್ಕಷ್ಟೇ ಅಲ್ಲ, ಈ ವಿಜ್ಞಾನ ಯುಗದಲ್ಲಿ ತಾಂತ್ರಿಕ ಸಾಧನಗಳನ್ನು ಅವಲಂಬಿಸಿಕೊಂಡು ತನ್ನ ಬದುಕನ್ನು ಸಾಕಷ್ಟು ಸುರಕ್ಷಿತ ಹಾಗೂ ಸುಖಮಯವನ್ನಾಗಿ ಮಾಡಿಕೊಂಡಿರುವ ಮಾನವನಿಗಿಂದು ಸೂರ್ಯನಿಂದಾಗಿ ಆ ಜೀವನಶೈಲಿಯಲ್ಲಿ ದೊಡ್ಡ ಏರುಪೇರಾಗುವುದನ್ನು ತಡೆಯಲು ಸೂರ್ಯನ ಅಧ್ಯಯನ ಅನಿವಾರ್ಯವಾಗಿದೆ. ಇದರಿಂದಾಗಿ ತನ್ನ ತಾಂತ್ರಿಕ ಕೌಶಲವನ್ನು ಅಪಾರವಾಗಿ ವ್ಯಯಿಸುವ ಮೂಲಕ ಅನೇಕ ರೋಬಾಟ್ ನೌಕೆಗಳನ್ನು ಅಂತರಿಕ್ಷಕ್ಕೆ ಉಡಾಯಿಸಿ ಸೂರ್ಯನ ಕೂಲಂಕಷ ವೀಕ್ಷಣೆ ನಡೆಸಿದ್ದಾನೆ. ಆ ಪೈಕಿ 'ಪಾರ್ಕರ್ ಸೌರ ಶೋಧಕ' ಒಂದು ವಿಶಿಷ್ಟ ನೌಕೆ.


'ಪಾರ್ಕರ್' ರೋಬಾಟ್ ನೌಕೆಯನ್ನು ಅತ್ಯಂತ ಜಾಗರೂಕತೆಯಿಂದ ಸೂರ್ಯನ ಸಮೀಪಕ್ಕೆ ಕಳುಹಿಸುವ ಸಾಹಸವನ್ನು ಮಾನವನಿಂದು ಯಶಸ್ವಿಯಾಗಿ ಮಾಡಿದ್ದಾನೆ. ಹೀಗೆ ಪಾರ್ಕರ್ ನೌಕೆಯ ಪಥವನ್ನು ಎಚ್ಚರಿಕೆಯಿಂದ ಯೋಜಿಸುವ, ಆ ಪಥದಲ್ಲಿ ಅದು ಸಾಗುತ್ತಿದೆಯೇ ಎಂಬುದನ್ನು ಅರಿಯುವ ಮೂಲಕ ಅದು 2024ರ ಡಿಸೆಂಬರ್ 24ರಂದು (ಭಾರತೀಯ ಕಾಲಮಾನ ಕ್ರಿಸ್‌ಮಸ್ ದಿನದಂದು ಬೆಳಗಿನ ಜಾವ 5.23ಕ್ಕೆ) ಸೂರ್ಯನಿಗೆ ಅತ್ಯಂತ ಸಮೀಪದಲ್ಲಿ ಹಾದು ಹೋಗುವುದೇನೋ ಮಾನವನಿಗೆ ಖಚಿತವಾಗಿತ್ತು. ಆದರೆ ಆ ವೇಳೆಯಲ್ಲಿ ಅದು ಸೂರ್ಯನ 'ಹಿಂಭಾಗ'ದಲ್ಲಿದ್ದುದರಿಂದ ಆ ಹಾದುಹೋಗುವಿಕೆಯ ವೇಳೆಯಲ್ಲಿ ಅದು 'ಬದುಕುಳಿದಿದೆಯೇ' ಎಂಬುದು ಖಚಿತವಾಗಿರಲಿಲ್ಲ. ಅದಕ್ಕಾಗಿ ನಾಸಾ ವಿಜ್ಞಾನಿಗಳು ಕೆಲಕಾಲ ಕಾಯುವುದು ಅನಿವಾರ್ಯವಾಯಿತು.

ಡಿಸೆಂಬರ್ 27ರಂದು ಆ ನೌಕೆಯಿಂದ ಬಂದ ಒಂದು ಕಿರುಸಂದೇಶ ಅದು ಸುರಕ್ಷಿತವಾಗಿರುವುದನ್ನು ಸಾರಿತು. ಅಲ್ಲಿಗೆ ಪಾರ್ಕರ್‌ನ ಸಾಹಸ ಮಾನವನ ಒಂದು ಅಪ್ರತಿಮ ಸಾಧನೆಯಾಯಿತು. ನಂತರ, ಹೊಸ ವರ್ಷ ಉದಯಿಸಿದಂತೆ ತನ್ನ ಆರೋಗ್ಯವನ್ನು ಕುರಿತಂತೆ ಪಾರ್ಕರ್ ರೇಡಿಯೊ ತರಂಗಗಳ ಮೂಲಕ ಕಳುಹಿಸಿದ ಮಾಹಿತಿ ಆ ರೋಬಾಟ್ ನೌಕೆ ಸುರಕ್ಷಿತವಾಗಿರುವುದನ್ನು ಖಚಿತಪಡಿಸಲಾಗಿ, ಅಮೆರಿಕದ ಅಂತರಿಕ್ಷ ವಿಜ್ಞಾನಿಗಳು ಹಾಗೂ ಎಂಜಿನಿಯರ್‌ಗಳು ಸರಾಗವಾಗಿ ಉಸಿರಾಡಲಾರಂಭಿಸಿದರು.





ಪಾರ್ಕರ್ ನೌಕೆಯ ಮೇಲ್ಭಾಗದಲ್ಲಿರುವ ಅದರ ಶಾಖ ಕವಚಕ್ಕೆ ಸಂಬಂಧಿಸಿದ ಕಾರ್ಯದಲ್ಲಿ ಮಗ್ನನಾದ ನಾಸಾ ತಂತ್ರಜ್ಞ


ಸೌರ ಗಾಳಿ ಹಾಗೂ ಮಂಗಳಗ್ರಹದ ಮೇಲೆ ಅದರ ಪ್ರಭಾವ, ಕಲಾವಿದನ ಕಲ್ಪನೆಯಲ್ಲಿ